ಕರ್ನಾಟಕ ವಿಧಾನ ಸಭೆ

ಶುಕ್ರವಾರ 26 ನೇ ಜುಲೈ 1996 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 9.40 ಗಂಟೆಗೆ ಸಮಾವೇಶ ಗೊಂಡಿತು.

ಉಪಾಧ್ಯಕ್ಷರು : ಶ್ರೀ ಚಂದ್ರಶೇಖರ ಮಾಮನಿ ಅವರು ಪೀಠವನ್ನು ಅಲಂಕರಿಸಿದ್ದರು.

(ಪ್ರಶ್ನೋತ್ತರಗಳು)

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

ವಿಷಯ :- ಚಿಕ್ಕನಾಯಕನ ಹಳ್ಳಿ ಟೌನ್‌ಗೆ ಸರ್ಕಾರಿ ಬಸ್ ನಿಲ್ದಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 227 (1636)

ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕನಾಯಕನಹಳ್ಳಿ ಟೌನ್‌ಗೆ ಸರ್ಕಾರ ವಾಹನ ನಿಲ್ದಾಣ ಮಂಜೂರಾಗಿದೆಯೇ;

ಆ) ಹಾಗಿದ್ದರೆ ವಾಹನ ನಿಲ್ದಾಣವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಸಚಿವರು) :-

ಅ) ಹೌದು.

ಆ) ಈಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಶದಲ್ಲಿರುವ 1-10 ಎಕರೆ ನಿವೇಶನವು ಸಾಕಾಗುತ್ತಿಲ್ಲ. ಹೆಚ್ಚುವರಿ ನಿವೇಶನವನ್ನು ಪಡೆಯಲು ಪ್ರಯತ್ನಿಸ ಲಾಗುತ್ತಿದೆ. ಹೆಚ್ಚುವರಿ ನಿವೇಶನ ಪಡೆದ ನಂತರ ಮತ್ತು ಸಂಪನ್ಮೂಲಗಳ ಲಭ್ಯತೆ ಗಳನ್ನು ಅವಲಂಬಿಸಿ ಬಸ್ ನಿಲ್ದಾಣ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಎನ್. ಬಸವಯ್ಯ :- ಮಾನ್ಯ ಉಪಾಧ್ಯಕ್ಷರೇ, 1985 ರಲ್ಲಿ ವೀರಣ್ಣ ನವರು ಅಡಿಗಲ್ಲನ್ನು ಹಾಕಿ ಬಸ್ ಸ್ಟ್ಯಾಂಡ್ ಎಂದು ಹೇಳಿ ಹೊರಟುಹೋದರು. ಆಲ್ಲಿಂದ ಯಾರೂ ಬರಲಿಲ್ಲ. ಮಾನ್ಯ ಭೀಮಣ್ಣ ಖಂಡ್ರೆಯವರು ಸಾರಿಗೆ ಸಚಿವ ರಾಗಿದ್ದಾಗ ಜಾಗ ಸಾಲುವುದಿಲ್ಲ ಎಂದು ಹೇಳಿದರು. ಎಂಟು ಸೈಟುಗಳನ್ನು ಆಲ್ಲಿ

ಮಾರಿದ್ದರೂ ಕೂಡ ಅದನ್ನು ವಾಪಸ್ ಕೊಡಿಸಿದ್ದೇವೆ. ಆಗ ಆ ಇಂಜಿನಿಯರ್ ಜಾಗ ಸಾಕು ಎಂದು ಹೇಳಿದ್ದರು. ಆದ್ದರಿಂದ ತಾವು ಕೂಡ ಪರಿಶೀಲನೆ ಮಾಡಿ ಆ ಜಾಗದಲ್ಲಿ ಬಸ್ ಸ್ಟಾಂಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಮಾನ್ಯ ಉಪಾಧ್ಯಕ್ಷರೇ, ಚಿಕ್ಕನಾಯಕನ ಹಳ್ಳಿಗೆ ನಮ್ಮ 27 ಕೆಎಸ್ಆರ್‌ಟಿಸಿ ಬಸ್‌ಗಳು ಹೋಗಿಬರುತ್ತವೆ. ಈಗ 150 ಬಸ್ 200 ಬಸ್ ಹೋಗುವಂಥ ಪ್ರದೇಶಗಳಿಗೆ ನಾವು ಇನ್ನೂ ಬಸ್ ಸ್ಟಾಂಡ್‌ಗಳನ್ನು ಕಟ್ಟುವ ಸ್ಥಿತಿಯಲ್ಲಿ ಆರ್ಥಿಕವಾಗಿ ರಾಜ್ಯರಸ್ತೆ ಸಾರಿಗೆ ಸಂಸ್ಥೆ ಇಲ್ಲ. ಆದರೂ ಸಹಿತ ನಾನು ಪ್ರಯತ್ನವನ್ನು ಮಾಡುತ್ತಿದ್ದೇನೆ. ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರವಾಗಿರುವುದರಿಂದ ಈ ವರ್ಷದ ನಮ್ಮ ರಸ್ತೆ ಸಾರಿಗೆ ಸಂಸ್ಥೆಯ ಸಿವಿಲ್ ಇಂಜಿನಿಯರಿಂಗ್ ವರ್ಕ್ಸ್‌ಗೆ ಅಂದರೆ ಬಸ್ ಸ್ಟಾಂಡ್, ಡಿಪೋಗಳು ಇಂಥವುಗಳನ್ನು ಕಟ್ಟಲಿಕ್ಕೆ ಸುಮಾರು 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದು ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಆದ್ಯತೆಯ ಮೇರೆಗೆ ನಾನೊಂದು ಸಾರಿ ಸ್ಥಳ ಪರಿಶೀಲನೆ ಮಾಡುತ್ತೇನೆ. ಒಂದೇ ಕಡೆ ಹತ್ತು ಗುಂಟೆ ಜಮೀನು ಕೂಡಿಸಿದ್ದಾರೆ. ಆದರಿಂದ ಏನು ಉಪಯೋಗವಾಗುವುದಿಲ್ಲ. ಇನ್ನೂ ಹೆಚ್ಚಿನ ಜಮೀನು ಬೇಕಾಗುತ್ತದೆ. ನಾನು ಆದರ ಸ್ಥಳ ಪರಿಶೀಲನೆಯನ್ನು ಮಾಡಿ ಅಧಿಕಾರಿಗಳ ಜೊತೆಯಲ್ಲಿ ಮಾನ್ಯ ಶಾಸಕರ ಜೊತೆಯಲ್ಲಿ ಚರ್ಚೆ ಮಾಡಿ ಸಾರ್ವಜನಿಕ ಹಿತದೃಷ್ಟಿಯಿಂದ ಸಾರಿಗೆ ಸಂಸ್ಥೆಯ ಆರ್ಥಿಕ ಚೌಕಟ್ಟಿನೊಳಗಡೆ ಇದನ್ನು ಮಾಡಿಕೊಡಲಿಕ್ಕೆ ಪ್ರಯತ್ನವನ್ನು ಪಡುತ್ತೇನೆ.

ಶ್ರೀ ಎನ್. ಬಸವಯ್ಯ :- ಮಾನ್ಯ ಉಪಾಧ್ಯಕ್ಷರೇ, ಅಡಿಗಲ್ಲನ್ನು ಹಾಕಿರುವು ದರಿಂದ ಕೊಟ್ಟಿರುವ ಜಾಗ ಸಾಕು ಎಂದು ಹೇಳಿ ಹಿಂದೆ ಖಂಡ್ರೆಯವರು ಇದ್ದ ಕಾಲದಲ್ಲಿ ಇಂಜಿನಿಯರ್ ಹೇಳಿದ್ದರು. ನಾವು ಎಂಟು ಸೈಟುಗಳನ್ನು ಹರಾಜು ಹಾಕಿದ್ದರೂ ವಾಪಸ್ ಕೊಡಿಸಿದ್ದೇವೆ. ಇನ್ನು ಸ್ವಲ್ಪ ಜಾಗ ಬೇಕಾದರೂ ನಾವು ಖಂಡಿತಾ ಕೊಡಿಸಿಕೊಡುತ್ತೇವೆ. ಆದ್ಯತೆಯ ಮೇಲೆ ಈ ಸಾರಿ ಬಸ್ ಸ್ಟಾಂಡ್‌ನ್ನು ಮಾಡಿಸಿ ಕೊಡುತ್ತೀರಾ ಸ್ವಾಮಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಮಾನ್ಯ ಉಪಾಧ್ಯಕ್ಷರೇ, ಪಾಪ ಭೀಮಣ್ಣ ಖಂಡ್ರೆಯವರು ಅಡಿಗಲ್ಲನ್ನು ಹಾಕಿದ್ದಲ್ಲಿ ಅಲ್ಲಿ ಅಡಿಗಲ್ಲನ್ನು ಹಾಕಿದ್ದು ನಾನೇನೆ 1987ನೇ ಇಸವಿಯಲ್ಲಿ. ಪಾಪ ಅವರು ಭೀಮಣ್ಣ ಖಂಡ್ರೆಯವರನ್ನು ಟೀಕೆ ಮಾಡುತ್ತಿದ್ದಾರೆ. ಅದು ಸರಿಯಲ್ಲ. ನಾನು ಅಡಿಗಲ್ಲನ್ನು ಹಾಕಿದ್ದು. ಅದಾದ ಮೇಲೆ ಕೆಲಸವಾಗಿಲ್ಲ. ನಾನೇ ಅಡಿಗಲ್ಲನ್ನು ಹಾಕಿದ್ದೇನೆ. ಮತ್ತು ಅದಕ್ಕೆ ಆದ್ಯತೆಯನ್ನು ಕೊಡಬೇಕೆಂದು ನಾನು ಈಗಾಗಲೇ ಹೇಳಿದ್ದೇನೆ ಮತ್ತು ಅದನ್ನೇ ಪುನರುಚ್ಚರಿಸುತ್ತೇನೆ.